ಮೈಸೂರು ವಿಶ್ವವಿದ್ಯಾನಿಲಯ
ಸ್ಥಾಪನೆ 1916
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್‌ಐಆರ್‌ಎಫ್–2022: ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನವನ್ನು ಹೊಂದಿದೆ)

ಸಂಖ್ಯೆ: ಪವಿ/8.6/07/ಅಧಿಸೂಚನೆ/2010-11

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು-570 005

**ದಿನಾಂಕ: 09-10-2024**

# ಅ ಧಿ ಸೂ ಚ ನೆ

**ವಿಷಯ: ನವೆಂಬರ್/ಡಿಸೆಂಬರ್-2024ರಲ್ಲಿ ಜರುಗುವ 1, 3 ಮತ್ತು 5ನೇ ಸೆಮಿಸ್ಟರ್‌ನ (CBCS & Non-CBCS Repeaters) ಸ್ನಾತಕ ಪದವಿ (UG) (2004-05ನೇ ಶೈಕ್ಷಣಿಕ ಸಾಲಿನಿಂದ 2020-21ನೇ ಸಾಲಿನವರೆಗಿನ ಪುನರಾವರ್ತಿತ ವಿದ್ಯಾರ್ಥಿಗಳಿಗೆ) ಪರೀಕ್ಷೆಯ ಬಗ್ಗೆ.**

ಉಲ್ಲೇಖ:
1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಅಧಿಸೂಚನೆ ಸಂಖ್ಯೆ:ಎಸಿ7(ಎ)/59/2024-25, ದಿನಾಂಕ:26-07-2024 (ಶೈಕ್ಷಣಿಕ ವೇಳಾಪಟ್ಟಿಗೆ ಸಂಬಂಧಿಸಿರುವುದು).
2. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಅಧಿಸೂಚನೆ ಸಂಖ್ಯೆ:ಎಸಿ2(ಎಸ್)/264/2023-24, ದಿನಾಂಕ:06-05-2024 (ಪರೀಕ್ಷಾ ಶುಲ್ಕಗಳಿಗೆ ಸಂಬಂಧಿಸಿರುವುದು).
3. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಅಧಿಸೂಚನೆ ಸಂಖ್ಯೆ:ಎಸಿ2(ಎಸ್)/34/1990-91, ದಿನಾಂಕ:24-11-2023 (ಎರಡುಪಟ್ಟು ಅವಧಿ ಮುಗಿದ ನಂತರ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪುನಃ ಪರೀಕ್ಷೆ ಬರೆಯಲು ನೀಡಿರುವ ಅಂತಿಮ ಅವಕಾಶಕ್ಕೆ ಸಂಬಂಧಿಸಿರುವುದು).

******

**ನವೆಂಬರ್/ಡಿಸೆಂಬರ್-2024ರ ಮಾಹೆಯಲ್ಲಿ ನಡೆಯಲಿರುವ 1, 3 ಮತ್ತು 5ನೇ ಸೆಮಿಸ್ಟರ್‌ನ (CBCS & Non-CBCS Repeaters) ಸ್ನಾತಕ ಪದವಿ (UG) (2004-05ನೇ ಶೈಕ್ಷಣಿಕ ಸಾಲಿನಿಂದ 2020-21ನೇ ಸಾಲಿನವರೆಗಿನ ಪುನರಾವರ್ತಿತ ವಿದ್ಯಾರ್ಥಿಗಳಿಗೆ) ವಿವಿಧ ಪದವಿ ಪರೀಕ್ಷೆಗಳು ದಿನಾಂಕ:15-11-2024 ರಿಂದ ಪ್ರಾರಂಭವಾಗಲಿದೆ, ಇದರ ವಿವರಗಳು ಕೆಳಕಂಡಂತಿರುತ್ತದೆ.**

| ಕ್ರ.ಸಂ | ವಿವರಗಳು | ಅಂತಿಮ ದಿನಾಂಕ |
|---|---|---|
| 1 | ಪರೀಕ್ಷಾ ಶುಲ್ಕ ಪಾವತಿಸಲು ಹಾಗೂ ಭರ್ತಿಮಾಡಿದ ಅರ್ಜಿಗಳನ್ನು ಕಾಲೇಜಿಗೆ ಸಲ್ಲಿಸಲು | **23.10.2024** |
| 2 | ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಗಳನ್ನು ಕಾಲೇಜಿನವರು ಭರ್ತಿ ಮಾಡಲು | **26.10.2024** |
| 3 | ಪರೀಕ್ಷಾ ಶುಲ್ಕವನ್ನು ಡಿ.ಡಿ ಮೂಲಕ ಪರೀಕ್ಷಾ ಖಾತೆಗೆ **ಪರೀಕ್ಷಾ ಖಾತೆ ಸಂಖ್ಯೆ: 54007591200 (Examination Account)** SBI, University Campus, Mysuru ಇವರಿಗೆ ಪಾವತಿಸಿ ಚಲನ್ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು | **30.10.2024** |
| 4 | ಪ್ರವೇಶ ಪತ್ರಗಳ ಮುದ್ರಣದ ನಂತರ ವಿಶ್ವವಿದ್ಯಾನಿಲಯದ ಅನುಮೋದನೆ ಪಡೆಯಲು [ಆನ್‌ಲೈನ್ ಮೂಲಕ ಅಭ್ಯರ್ಥನಾ ಪಟ್ಟಿಯನ್ನು ಮುದ್ರಿಸಿ ಪ್ರಾಂಶುಪಾಲರ ಸಹಿ ಪಡೆದು ಒಂದು ಪ್ರತಿಯನ್ನು ಪ್ರವೇಶ ಪತ್ರಗಳ ಜೊತೆಯಲ್ಲಿ ಕುಲಸಚಿವ (ಪರೀಕ್ಷಾಂಗ) ಇವರಿಗೆ ಸಲ್ಲಿಸಬೇಕು] | **07.11.2024** |
| 5 | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | **15.11.2024** |

ಸೂಚನೆಗಳು:

1. ಪರೀಕ್ಷಾ ಅರ್ಜಿಯು (CBCS & Non-CBCS- ಪದ್ಧತಿಯ Repeaters) **PDF Mode** ನಲ್ಲಿದ್ದು ವಿದ್ಯಾರ್ಥಿ ಪೋರ್ಟ್‌ಲ್, ಕಾಲೇಜ್ ಪೋರ್ಟ್‌ಲ್ ಮತ್ತು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಲಭ್ಯವಿದ್ದು, ವಿದ್ಯಾರ್ಥಿಗಳು ಸದರಿ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.
2. ಪ್ರಾಯೋಗಿಕ ಪರೀಕ್ಷೆಗಳು ಮುಗಿದ ನಂತರ ಆ ದಿನದಂದೇ **Online** ಮುಖಾಂತರ ಅಂಕಗಳನ್ನು ಕಡ್ಡಾಯವಾಗಿ ನಮೂದಿಸುವುದು ಹಾಗೂ ಅಂಕಗಳ ಮೂಲಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.

ಎಲ್ಲಾ ಪದವಿ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಕಾಲೇಜಿನ ಇಂಟರ್‌ನೆಟ್ ಸೌಲಭ್ಯವನ್ನು ಬಳಸಿ ನೇರವಾಗಿ ವಿಶ್ವವಿದ್ಯಾನಿಲಯದ **Web Server** ಗೆ ಮಾಹಿತಿಯನ್ನು ವರ್ಗಾವಣೆ **(Online Transmission)** ಮಾಡುವಂತೆ/ ನಮೂದಿಸುವಂತೆ ತಿಳಿಸಲಾಗಿದೆ. ಅನಿವಾರ್ಯ ಕಾರಣದಿಂದಾಗಿ ಕಾಲೇಜಿನಲ್ಲಿ ಇಂಟರ್‌ನೆಟ್ ಸೌಲಭ್ಯವಿಲ್ಲದಿದ್ದ ಪಕ್ಷದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಯಾವುದೇ ಕಂಪ್ಯೂಟರ್ ಕೇಂದ್ರದಿಂದಲೂ ಮಾಹಿತಿ ರವಾನಿಸಬಹುದಾಗಿದೆ.

## ಪರೀಕ್ಷಾ ಶುಲ್ಕಗಳ ದರಗಳು **(CBCS & Non-CBCS Repeaters)**

(ಎರಡುಪಟ್ಟು ಅವಧಿಯೊಳಗಿನ ಪರೀಕ್ಷಾ ಶುಲ್ಕಗಳು {2019–20 ಹಾಗೂ 2020–21ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಗೆ} ಪರೀಕ್ಷಾ ಶುಲ್ಕದ ಜೊತೆಗೆ ಅಂಕಪಟ್ಟಿ ಶುಲ್ಕ ರೂ.426/– ಗಳನ್ನು ಸಹ ಪಾವತಿಸಬೇಕು)

| Sl. No. | Programme/Course | Amount in Rs. |
|---|---|---|
| 1. | **B.A./B.P.A./B.A. (Fine Arts) B.V.A/B.Com :** | |
| | a) I and III Semester whole Examination | **Rs.1172/-** |
| | Per paper with Practical | **Rs.759/-** |
| | Per paper without Practical/Skill Development | **Rs.585/-** |
| | b) V Semester whole Examination | **Rs.1411/-** |
| | Per paper with Practical | **Rs.759/-** |
| | Per paper without Practical | **Rs.585/-** |
| | c) B.V.A.-VII Semester whole Examination | **Rs.1730/-** |
| | Per paper with Practical | **Rs.1025/-** |
| | Per paper without Practical/Skill Development | **Rs.585/-** |
| 2. | **B.Sc./BCA/B.Sc. in Family & Community Science:** | |
| | a) I and III Semester whole Examination | **Rs.1318/-** |
| | Per paper with Practical | **Rs.759/-** |
| | Per paper without Practical | **Rs.585/-** |
| | b) V Semester whole Examination | **Rs.1464/-** |
| | Per paper with Practical | **Rs.759/-** |
| | Per paper without Practical | **Rs.585/-** |

| | | |
|---|---|---|
| 3. | **B.F.A/B.B.A/B.B.M./B.S.W./B.Sc.(Speech & Hearing) & B.Sc.Ed (H & I) :** | |
| | a) I, III & V Semester Whole Examination (per semester) | Rs.1730/- |
| | Per paper with Practical | Rs.1025/- |
| | Per paper without Practical | Rs.585/- |
| | BASLP (Internship fee for 4th year) | Rs.2662/- |
| | **B.B.A (T&H)/B.B.A(T&T)/B.T.H./B.B.A.(T.H.M) :** | |
| | a) I, III & V Semester Whole Examination (per semester) | Rs.3328/- |
| | Per paper with Practical | Rs.1025/- |
| | Per paper without Practical | Rs.585/- |

***Subject to a maximum of whole examination Fee fixed per semester.***

**NOTE:** For Science subjects in Semester Scheme, if a candidate is declared exempted for any Practical examination, Examination fee for such candidate is same as that of per paper without Practical/Skill Development.

**ಸೂಚನೆಗಳು:**

1. ಉಲ್ಲೇಖ-03ರ ವಿಶ್ವವಿದ್ಯಾನಿಲಯದ ಅಧಿಸೂಚನೆಯಂತೆ ಸ್ನಾತಕ ಪದವಿ ಪ್ರವೇಶಾತಿಯಲ್ಲಿ ಸೆಮಿಸ್ಟರ್ ಪದ್ಧತಿ ಪ್ರಾರಂಭವಾದ ಸಾಲಿನಿಂದ ದಾಖಲಾದ ವಿದ್ಯಾರ್ಥಿಗಳಿಗೆ ತಮ್ಮ ಪದವಿಯ ಎರಡು ಪಟ್ಟು ಅವಧಿಯ ನಂತರವು ಪರೀಕ್ಷೆ ತೆಗೆದುಕೊಳ್ಳುವ (**Odd Semester**) ವಿದ್ಯಾರ್ಥಿಗಳಿಗೆ ಈ ಪರೀಕ್ಷೆಯು ಕೊನೆಯ ಪ್ರಯತ್ನವಾಗಿರುತ್ತದೆ. ಈ ಸೌಲಭ್ಯ ಪಡೆಯುವಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವು ನಾಲ್ಕುಪಟ್ಟು ಜಾಸ್ತಿ ಇರುತ್ತದೆ. ಆದರೆ ಗರಿಷ್ಠ ಮಿತಿ ಇರುವುದಿಲ್ಲ.
2. **Repeaters** ವಿದ್ಯಾರ್ಥಿಗಳು ಈ ಹಿಂದೆ ವ್ಯಾಸಂಗ ಮಾಡಿದ ಹಳೆಯ ಪಠ್ಯಕ್ರಮವನ್ನೇ ಅನುಸರಿಸುವುದು.
3. ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.
4. 2019-20ನೇ ಹಾಗೂ ಈ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ದಾಖಲಾಗಿರುವ **Odd Semester** ವಿದ್ಯಾರ್ಥಿಗಳಿಗೆ ಇದು ಕೊನೆಯ ಪ್ರಯತ್ನವಾಗಿರುತ್ತದೆ.
5. ಪಾವತಿಸಬೇಕಾದ ಒಟ್ಟು ಶುಲ್ಕವನ್ನು ಪರೀಕ್ಷಾ ಖಾತೆ ಸಂಖ್ಯೆ: **54007591200 (Examination Account)** ಗೆ **DD** ಮೂಲಕ **Finance Officer, University of Mysore, Mysuru** ಇವರ ಹೆಸರಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ ಕ್ಯಾಂಪಸ್ ಶಾಖೆ, ಮೈಸೂರು ಇಲ್ಲಿ ಸಂದಾಯ ಮಾಡಿ ಮೂಲ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.
6. ಅಭ್ಯರ್ಥಿಗಳಿಂದ ನಗದಾಗಿ ಪಡೆದ ಒಟ್ಟು ಶುಲ್ಕಕ್ಕೆ ಮೇಲೆ ತಿಳಿಸಿರುವ ದಿನಾಂಕದೊಳಗಾಗಿ ಡಿಡಿ ಮೂಲಕ ಹಣ ಸಂದಾಯ ಮಾಡಿ ಚಲನ್‌ನ ಪ್ರತಿಯನ್ನು ಕುಲಸಚಿವ (ಪರೀಕ್ಷಾಂಗ) ಇವರಿಗೆ ಕಳುಹಿಸುವ ಜವಾಬ್ದಾರಿ ಕಾಲೇಜಿನ ಪ್ರಾಂಶುಪಾಲರುದ್ದಾಗಿರುತ್ತದೆ.
7. ವಿಶ್ವವಿದ್ಯಾನಿಲಯಕ್ಕೆ ಹಣ ಸಂದಾಯಮಾಡುವ ಸಂದರ್ಭದಲ್ಲಿ ಚಲನ್‌ನಲ್ಲಿ ಪ್ರತಿ ಪದವಿಯ ಸೆಮಿಸ್ಟರ್‌ವಾರು ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕವನ್ನು ಪ್ರತ್ಯೇಕವಾಗಿ ನಮೂದಿಸಿ ವಿವರಣೆಯೊಂದಿಗೆ ಸಲ್ಲಿಸಬೇಕು.
8. ಅಭ್ಯರ್ಥನಾ ಪಟ್ಟಿಯ ಪ್ರತಿಪುಟದಲ್ಲಿ ಒಟ್ಟಾರೆ ಶುಲ್ಕವನ್ನು ಕ್ರೋಢೀಕರಿಸಿ ಅದನ್ನು ಮುಂದಿನ ಪುಟಕ್ಕೆ ಮುಂದುವರೆಸಿ ಕೊನೆಪುಟದಲ್ಲಿ ಒಟ್ಟಾರೆ ಸಂದಾಯವಾಗಬೇಕಿರುವ ಶುಲ್ಕವನ್ನು ನಮೂದಿಸಬೇಕು.
9. ಜೋಡಣೆ (Tag) ಮಾಡಿರುವ ಪರೀಕ್ಷಾ ಕೇಂದ್ರಗಳನ್ನು ಹೊರತುಪಡಿಸಿ ಆಯಾಯಾ ಕಾಲೇಜುಗಳನ್ನೇ ಪರೀಕ್ಷಾ ಕೇಂದ್ರವನ್ನಾಗಿ ನಿಗದಿಪಡಿಸಲಾಗಿದೆ ಹಾಗೂ ಆಯಾ ಕಾಲೇಜಿನ ಪ್ರಾಂಶುಪಾಲರನ್ನು ಮುಖ್ಯ ಅಧೀಕ್ಷಕರನ್ನಾಗಿ ನೇಮಿಸಲಾಗಿದೆ. ಇದಕ್ಕೆ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದಿಲ್ಲ.

## ಪರೀಕ್ಷಾ ಶುಲ್ಕಗಳ ದರಗಳು (CBCS & Non-CBCS-ಪದ್ಧತಿಯ Repeaters)

**2018–19ನೇ ಹಾಗೂ ಈ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕಗಳು**
**(ಪರೀಕ್ಷಾ ಶುಲ್ಕದ ಜೊತೆಗೆ ಅಂಕಪಟ್ಟಿ ಶುಲ್ಕ ರೂ.426/– ಗಳನ್ನು ಸಹ ಪಾವತಿಸಬೇಕು)**

| Sl. No. | Course | Amount in Rs.Fees Details for those who have completed double the duration of Course |
|---|---|---|
| 1 | **B.A./B.P.A./B.A.(Fine Arts)/B.V.A/B.Com** | |
| | a) I and III Semester whole Examination | 4,688/- |
| | Per Paper with Practical | 3,036/- |
| | Per Paper without Practical | 2,340/- |
| | b) V Semester whole Examination | 5,644/- |
| | Per Paper with Practical | 3,036/- |
| | Per Paper without Practical | 2,340/- |
| | c) VII Semester whole Examination | 6,920/- |
| | Per Paper with Practical | 4,100/- |
| | Per Paper without Practical | 2,340/- |
| 2 | **B.Sc/B.C.A./B.Sc in Family & Community Science** | |
| | a) I and III Semester whole Examination | 5,272/- |
| | Per Paper with Practical | 3,036/- |
| | Per Paper without Practical | 2,340/- |
| | b) V Semester whole Examination | 5,856/- |
| | Per Paper with Practical | 3,036/- |
| | Per Paper without Practical | 2,340/- |
| 3 | **BFA/BBA/BBM/B.Sc (Sp. & Hr.)/BSW/& B.Sc.Ed(H & I)** | |
| | I, III & V Semester whole Examination (per Sem) | 6,920/- |
| | Per Paper with Practical | 4,100/- |
| | Per Paper without Practical | 2,340/- |
| | BASLP (Internship fee for 4th year) | 10,648/- |
| 4 | **B.B.A (T&H & T&T)/B.T.H./B.B.A.(T.H.M) :** | |
| | I, III & V Semester whole Examination (per Semester) | 13,312/- |
| | Per Paper with Practical | 4,100/- |
| | Per Paper without Practical | 2,340/- |

**ವಿಶೇಷ ಸೂಚನೆಗಳು:**

1. ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಆಯಾಯ ಕಾಲೇಜಿನವರು ಪರೀಕ್ಷೆಗಳು ಪ್ರಾರಂಭವಾಗುವುದಕ್ಕೆ ಸಾಕಷ್ಟು ಮುಂಚಿತವಾಗಿ online ಮೂಲಕ ಪ್ರಿಂಟ್ ಪಡೆದು, ಕುಲಸಚಿವರು (ಪರೀಕ್ಷಾಂಗ) ಇವರ ಯಥಾಪ್ರತಿ (Facsimile) ಹಾಕಿಸಿಕೊಳ್ಳಬೇಕು ಮತ್ತು ಕುಲಸಚಿವ(ಪ) ಅವರ ಯಥಾಪ್ರತಿ (Facsimile) ಇಲ್ಲದೆ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಅವಕಾಶವಿರುವುದಿಲ್ಲ.
2. ಪರೀಕ್ಷಾ ಶುಲ್ಕವನ್ನು ಪಾವತಿಸಲು ಸಾಕಷ್ಟು ಕಾಲಾವಕಾಶ ನೀಡಿರುವುದರಿಂದ ವಿದ್ಯಾರ್ಥಿಗಳಿಗೆ ಸೂಕ್ತ ತಿಳುವಳಿಕೆ ನೀಡಿ, ನಿಗದಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಯಾವುದೇ ಕಾರಣಕ್ಕೂ ಪರೀಕ್ಷಾ ಶುಲ್ಕ ಪಾವತಿಸಲು ಹೆಚ್ಚುವರಿ ಕಾಲಾವಕಾಶ ನೀಡಲಾಗುವುದಿಲ್ಲ.
3. ಮೊದಲನೇ ಚಾತುರ್ಮಾಸದ ಸಿಬಿಸಿಎಸ್ ಸ್ಕೀಂನ ಎಲ್ಲಾ ಪದವಿಗಳಿಗೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆ ಕೋಡ್‌ಗಳನ್ನು ಆಯಾ ಕಾಲೇಜಿನ ಆನ್‌ಲೈನ್ ಮುಖಾಂತರ ಪಡೆಯಬಹುದಾಗಿದೆ. ಸರಿಯಾದ ಪ್ರಶ್ನೆಪತ್ರಿಕೆ ಕೋಡ್‌ಗಳನ್ನು ಕಾಲೇಜಿನವರು ವಿದ್ಯಾರ್ಥಿಗಳ ಗಮನಕ್ಕೆ ತಂದು ಪರೀಕ್ಷಾ ಅರ್ಜಿಯಲ್ಲಿವಿದ್ಯಾರ್ಥಿಗಳು ಭರ್ತಿಮಾಡಿರುವುದು ಸರಿಯಿದೆಯೇ ಎಂದು ಆನ್‌ಲೈನ್ ಮುಖಾಂತರ ನಮೂದಿಸುವುದು. ಒಂದು ವೇಳೆ ತಪ್ಪಾಗಿ ಕೋಡ್‌ಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದಲ್ಲಿ ಅದಕ್ಕೆ ಕಾಲೇಜಿನವರೇ ಹೊಣೆಗಾರರಾಗಿರುತ್ತಾರೆ.

**ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ಲಿಖಿತ ಪರೀಕ್ಷೆಗಳಿಗೆ ಸಂಬಂಧಪಟ್ಟ ವಿವರವಾದ ವೇಳಾಪಟ್ಟಿಯನ್ನು ಈ ಕಛೇರಿಯಿಂದ ಮುಂದಿನ ದಿನಗಳಲ್ಲಿ ಕಳುಹಿಸಲಾಗುವುದು.
2. ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು (ಅನುತ್ತೀರ್ಣರಾಗಿ ಮತ್ತೆ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳೂ ಸಹ ಸೇರಿದಂತೆ) ನಿಗದಿಪಡಿಸಲಾಗಿರುವ ಕೊನೆಯ ದಿನಾಂಕ ಅಥವಾ ಅದಕ್ಕಿಂತ ಮುಂಚಿತವಾಗಿ ತಾವು ವ್ಯಾಸಂಗ ಮಾಡಿರುವ ಕಾಲೇಜುಗಳಲ್ಲಿಯೇ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು ಮತ್ತು ಪರೀಕ್ಷೆಯ ಅಭ್ಯರ್ಥನಾ ಪತ್ರವನ್ನು ಸಹ ಸಲ್ಲಿಸಬೇಕು. **ವಿಶ್ವವಿದ್ಯಾನಿಲಯಕ್ಕೆ ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**
3. ಪರೀಕ್ಷೆಗಳನ್ನು ಮುಂದೂಡಬೇಕೆಂದು ಬರುವ ಯಾವ ಬಗೆಯ ಮನವಿಯನ್ನು ಯಾವುದೇ ಕಾರಣಕ್ಕೂ ಪುರಸ್ಕರಿಸಲಾಗುವುದಿಲ್ಲ.
4. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಮತ್ತು ಅದನ್ನು ಮುಂದಿನ ಪರೀಕ್ಷೆಗಳಿಗೂ ಸರಿದೂಗಿಸಿಕೊಳ್ಳಲಾಗುವುದಿಲ್ಲ.
5. ವಿಳಂಬವಾಗಿ (ಟಿ.ಎ.ಎಲ್) ಫಲಿತಾಂಶ ಪ್ರಕಟವಾಗುವ ವಿದ್ಯಾರ್ಥಿಗಳಿಗೆ ಅವರ ಫಲಿತಾಂಶವು ತಲುಪಿದ ದಿನಾಂಕದಿಂದ 7 ದಿವಸಗಳ ಅವಧಿಯೊಳಗೆ ಯಾವುದೇ ರೀತಿಯ ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕ ಪಾವತಿಸಲು ಅನುಮತಿ ಇರುತ್ತದೆ.
6. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಇತ್ತೀಚಿನ ಭಾವಚಿತ್ರದ ಮೇಲೆ ಪೂರ್ತಿ ಸಹಿ ಮಾಡಿ ವಿದ್ಯಾರ್ಥಿಯನ್ನು ಗುರುತಿಸಲಾಗಿದೆ, ಎಂದು ಬರೆಯಿಸಿ ಪ್ರಾಂಶುಪಾಲರಿಂದ ಸಹಿ ಮಾಡಿಸಿ ಅವರ ಪ್ರವೇಶ ಪತ್ರಿಕೆಗೆ ಅಂಟಿಸಿ ಪರೀಕ್ಷಾ ಅರ್ಜಿಯೊಡನೆ ಕಾಲೇಜಿಗೆ ನೀಡಬೇಕು.
7. **ಭಾವಚಿತ್ರಗಳಿಲ್ಲದ ಹಾಗೂ ಕುಲಸಚಿವರು (ಪರೀಕ್ಷಾಂಗ) ಅಥವಾ ಪ್ರಾಂಶುಪಾಲರ ಸಹಿ/ಮೊಹರು ಇಲ್ಲದ ಪ್ರವೇಶಪತ್ರಗಳನ್ನು ಪರೀಕ್ಷಾ ಕೊಠಡಿಯಲ್ಲಿ ಹಾಜರುಪಡಿಸುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಕೇಂದ್ರದ ಪರೀಕ್ಷಾ ಮುಖ್ಯಾಧಿಕಾರಿಗಳು/ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಾಗೂ ತನಿಖಾಧಿಕಾರಿಗಳು ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ಕೊಡುವುದಿಲ್ಲ.**
8. ಎಲ್ಲಾ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯ ಜೊತೆಗೆ ತಾವು ಪರೀಕ್ಷೆ ತೆಗೆದುಕೊಂಡಿರುವ ಆಯಾ ಸೆಮಿಸ್ಟರ್/ವರ್ಷಕ್ಕೆ ಸಂಬಂಧಪಟ್ಟ ಪರೀಕ್ಷೆಗಳ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು.

**ಪ್ರಾಂಶುಪಾಲರುಗಳಿಗೆ ಸಾಮಾನ್ಯ ಸೂಚನೆಗಳು:**

1. ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಮಾಹಿತಿಯನ್ನು Online ಮೂಲಕ ಎಂಟ್ರಿ ಮಾಡಿದ ನಂತರ ಕಾಲೇಜು ಹಂತದಲ್ಲಿಯೇ ಪ್ರವೇಶ ಪತ್ರಗಳನ್ನು ಮುದ್ರಿಸುವ ವ್ಯವಸ್ಥೆಯನ್ನು ಮಾಡಲಾಗುವುದು. ವಿದ್ಯಾರ್ಥಿಗಳ ಹಾಜರಾತಿ ಮತ್ತು ಪ್ರವೇಶಾತಿ ಅನುಮತಿಯನ್ನು ಪ್ರವೇಶಪತ್ರದಲ್ಲಿ ದೃಢೀಕರಿಸಿದ ನಂತರ ಕುಲಸಚಿವ (ಪರೀಕ್ಷಾಂಗ) ಅವರ ಮೇಲುಸಹಿಗಾಗಿ ಪರೀಕ್ಷೆ ಪ್ರಾರಂಭಕ್ಕಿಂತ ಮುಂಚಿತವಾಗಿ ಕಳುಹಿಸಬೇಕು.
2. ಆನ್‌ಲೈನ್ ಮುಖಾಂತರ ಯಾವುದಾದರೂ ವಿದ್ಯಾರ್ಥಿಗಳ ಮಾಹಿತಿಯನ್ನು ಸಲ್ಲಿಸಲಾಗದೇ ಇದ್ದಲ್ಲಿ ಅಂತಹವರ ಪರೀಕ್ಷಾ ಅರ್ಜಿಗಳನ್ನು (ವಿದ್ಯಾರ್ಥಿ ಮತ್ತು ಪ್ರಾಂಶುಪಾಲರ ಸಹಿ ಹಾಕಿರಬೇಕು) ವಿಶ್ವವಿದ್ಯಾನಿಲಯಕ್ಕೆ ದಿನಾಂಕ: 16.10.2024 ರೊಳಗೆ ಸಲ್ಲಿಸಿ ಅಪ್‌ಡೇಟ್ ಮಾಡಿಸಿಕೊಳ್ಳಬೇಕು.
3. ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಮೊಹರು ಮಾಡಿದ ಕವರುಗಳಲ್ಲಿ ಇಟ್ಟು ಕೇಂದ್ರದಲ್ಲಿ ನಡೆಯುವ ಎಲ್ಲಾ ವಿಷಯಗಳ ಪ್ರಾಯೋಗಿಕ (ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ಮುನ್ನ) ಪರೀಕ್ಷೆಗಳು ಮುಗಿದ ಮರು ದಿನವೇ ಕಳುಹಿಸಬೇಕು. ಈ ದಿನಾಂಕ ಮೀರಿ ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಕಳುಹಿಸುವಂತಹ ಕಾಲೇಜುಗಳಿಗೆ/ಸಂಸ್ಥೆಗಳಿಗೆ ಸೇರಿದ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳು ತಡವಾಗಿ ಪ್ರಕಟವಾಗುವ ಸಂಭವವನ್ನು ತಪ್ಪಿಸಲು ಜಾಗರೂಕರಾಗಿರಲು ಕೋರಲಾಗಿದೆ. ಉತ್ತರ ಪತ್ರಿಕೆಗಳ ಕಟ್ಟುಗಳಲ್ಲಿ (Answer Book Bundles) ಅಂಕಪಟ್ಟಿಗಳನ್ನು ಕಳುಹಿಸಬಾರದೆಂದು ಸೂಚಿಸಲಾಗಿದೆ. ಅಂಕಪಟ್ಟಿಗಳನ್ನು ತಯಾರಿಸುವಾಗ ವಿದ್ಯಾರ್ಥಿಯ ನೋಂದಣಿ ಸಂಖ್ಯೆಯನ್ನು (Register Number) ಪೂರ್ಣವಾಗಿ ಬರೆಯಬೇಕೆಂಬ ವಿಚಾರವನ್ನು ಎಲ್ಲಾ ಪ್ರಾಯೋಗಿಕ ಅಂಕಗಳ ಪಟ್ಟಿಯನ್ನು ಪ್ರಾಯೋಗಿಕ ಪರೀಕ್ಷಕರಿಗೆ ತಿಳಿಸಬೇಕು ಹಾಗೂ ಸಂಬಂಧಪಟ್ಟ ಪ್ರಾಯೋಗಿಕ ಪತ್ರಿಕೆಯ ನಿಖರವಾದ ಕೋಡ್ ನಂಬರನ್ನು ತಪ್ಪದೆ ಬರೆಯಬೇಕೆಂಬ ವಿಚಾರವನ್ನು ಸಹ ಪ್ರಾಯೋಗಿಕ ಪರೀಕ್ಷಕರಿಗೆ ತಿಳಿಸಬೇಕು. ಪ್ರಾಯೋಗಿಕ ಪರೀಕ್ಷಕರಿಗೆ ಪ್ರಾಯೋಗಿಕ ಅಂಕಗಳ ಪಟ್ಟಿಯನ್ನು (Marks List) ಒದಗಿಸುವುದಕ್ಕಿಂತ ಮೊದಲು ಆಯಾಯಾ ಕೇಂದ್ರದ ಮೊಹರನ್ನು (Seal) ಮಾರ್ಕ್ಸ್ ಲಿಸ್ಟ್‌ನ ಕೆಳಗಡೆ ಮಧ್ಯಭಾಗದಲ್ಲಿ ತಪ್ಪದೆ ಹಾಕಬೇಕು.

4. ಸಬ್ಸಿಡಿಯರಿ ಪತ್ರಿಕೆಗಳನ್ನು ಕಾಲೇಜು ಹಂತದಲ್ಲೇ ಮೌಲ್ಯಮಾಪನ ಮಾಡಿಸುವ ವ್ಯವಸ್ಥೆಯನ್ನು ರದ್ದುಪಡಿಸಲಾಗಿದೆ. ಆದ್ದರಿಂದ, ಎಲ್ಲಾ ಸಬ್ಸಿಡಿಯರಿ ಪತ್ರಿಕೆಗಳ ಉತ್ತರಪತ್ರಿಕೆಗಳನ್ನು ಸಹ ಪರೀಕ್ಷೆ ಮುಗಿದ ನಂತರ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು. ಅಂದರೆ ಕಾಲೇಜು ಹಂತದಲ್ಲಿ ಯಾವುದೇ ಥಿಯರಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಲು ಅವಕಾಶವಿರುವುದಿಲ್ಲ.
5. ವಿದ್ಯಾರ್ಥಿಗಳು ಗೈರುಹಾಜರಾದಲ್ಲಿ ಆ ಪರೀಕ್ಷಾ ದಿನದಂದೇ ಆನ್‌ಲೈನ್ ಮುಖಾಂತರ ಗೈರುಹಾಜರಿಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

ಕುಲಸಚಿವ (ಪರೀಕ್ಷಾಂಗ)

ಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಮಂಡ್ಯ ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು/ನಿರ್ದೇಶಕರು/ಡೀನರು, ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು/ಜೆ.ಎಸ್.ಎಸ್. ಕಾಲೇಜು ವಾಕ್ ಮತ್ತು ಶ್ರವಣ ಸಂಸ್ಥೆ, ಜೆ.ಎಸ್.ಎಸ್ ಕಾಲೇಜು ಎಂ.ಜಿ.ರಸ್ತೆ, ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ (ಕಾವ) ಸಿದ್ಧಾರ್ಥನಗರ, ಮೈಸೂರು.
2. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಜಿಲ್ಲಾಧಿಕಾರಿಗಳ ಕಛೇರಿ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ, ಮೈಸೂರು/ಮಂಡ್ಯ/ಹಾಸನ/ ಚಾಮರಾಜನಗರ.
5. ಜಿಲ್ಲಾ ಖಜಾನಾಧಿಕಾರಿಗಳು,ಮೈಸೂರು/ಮಂಡ್ಯ/ಹಾಸನ/ ಚಾಮರಾಜನಗರ.
6. ಆರಕ್ಷಕ ಅಧೀಕ್ಷಕರು, ಮೈಸೂರು/ಮಂಡ್ಯ/ಹಾಸನ/ ಚಾಮರಾಜನಗರ.
7. ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು
8. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿ, ವಾರ್ತಾ ಭವನ, ಎಚ್.ಸಿ.ದಾಸಪ್ಪ ವೃತ್ತ, ಮೈಸೂರು – ಮೇಲ್ಕಂಡ ಪ್ರಕಟಣೆ ಮುಖ್ಯಾಂಶಗಳನ್ನು ಎಲ್ಲಾ ದಿನಪತ್ರಿಕೆಗಳಲ್ಲಿ ಉಚಿತವಾಗಿ ಪ್ರಚಾರ ಮಾಡಲು ಕೋರಿ ಪ್ರತಿ ಕಳುಹಿಸಲಾಗಿದೆ.
9. ನಿರ್ದೇಶಕರು, ಪ್ರಸಾರ ಭಾರತಿ ಕೇಂದ್ರ, ಯಾದವಗಿರಿ, ಮೈಸೂರು – ಈ ಅಧಿಸೂಚನೆಯ ಮುಖ್ಯಾಂಶಗಳನ್ನು ತಮ್ಮ ಬಾನುಲಿ ಹಾಗೂ ಟಿ.ವಿ ವಾಹಿನಿ ಕೇಂದ್ರದಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಹಾಗೆ ಬಿತ್ತರಿಸಲು ಏರ್ಪಾಟನ್ನು ಮಾಡಲು ಕೋರಿದೆ.
10. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ, ಮಾನಸಗಂಗೋತ್ರಿ, ಮೈಸೂರು 570 006.
11. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ಉಪಕುಲಸಚಿವರು (ಶೈಕ್ಷಣಿಕ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
13. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
14. ಅಧ್ಯಕ್ಷರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು–ಈ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
15. ಸಂಯೋಜನಾಧಿಕಾರಿಗಳು, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
16. ಪ್ರಾಜೆಕ್ಟ್ ವ್ಯವಸ್ಥಾಪಕರು, ಮೆಟಾ–ಐ ಟೆಕ್ನಾಲಾಜೀಸ್ ಪ್ರೈವೇಟ್ ಲಿಮಿಟೆಡ್, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
17. ಪರೀಕ್ಷಾ ವಿಭಾಗದ ಎಲ್ಲಾ ಅಧೀಕ್ಷಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
18. ಎಲ್ಲಾ ಕಾರ್ಯನಿರ್ವಾಹಕರು (ಸಾಮಾನ್ಯ ವಿಭಾಗ ಮತ್ತು ಸ್ನಾತಕಪದವಿ ವಿಭಾಗ) ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
19. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿ ಅವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
20. ಕಛೇರಿ ಪ್ರತಿ.